- 13 -
ಕ್ರಿಮಿನಲ್ ಪ್ರಕರಣ ಸಂಖ್ಯೆ ಸಂ. :**3372/2022**
ಪಿ.ಡಬ್ಲ್ಯೂ : **01**

ದಿನಾಂಕ : **19.04.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಆರೋಪಿಗಳ ಪರ ಶ್ರೀ. ಎಲ್ ?ಜಿ ಜಿ . ವಕೀಲರಿಂದ :-**

ನಿಮ್ಮ ಸಹೋದರ ನಿಶ್ಚಿ ತಾರ್ಥ ಮೊದಲು ಮರಣಹೊಂದಿರುತ್ತಾರೊ ಅಥವಾ ನಂತರವೋ ಎಂದರೆ ಸಾಕ್ಷಿ ನಿಶ್ಚಿತಾರ್ಥ ಮೊದಲು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಹಾಗೂ 1 ನೇ ಆರೋಪಿಯ ವವಿವಾಹನದ ನಂತರ 1 ನೇ ಆರೋಪಿಯು ನಿಮ್ಮ ತಂದೆಯವರ ಮನಯಲ್ಲಿಯೇ ವಾಸ ಇರಬೇಕು ಎಂಬುದು ನಿಮ್ಮ ಇಚ್ಛೆ ಆಗಿತ್ತು ಎಂದರೆ ಸಾಕ್ಷಿ ಆ ರೀತಿ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ದೂರಿನಲ್ಲಿ 1 ನೇ ಆರೋಪಿಯು ಮದುವೆ ನಂತರ ನಿಮ್ಮ ತಂದೆಯವರ ಮನೆಯಲ್ಲೆ ಶಾಶ್ವತವಾಗಿ ವಾಸ ಇರುತ್ತೇನೆ ಎಂದು ಹೇಳಿದ್ದರು ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಆ ರೀತಿ ಹೇಳಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಭರವಸೆಯ ಆಧಾರದ ಮೇಲೆಯೇ ನೀವು ಹಾಗೂ ನಿಮ್ಮ ತಂದೆಯವರು ವಿವಾಹ ಮಾಡಿಕೊಳ್ಳಲು ಒಪ್ಪಿದ್ದು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮ್ಮ ವಿವಾಹದ ಮೊದಲು ಅಥವಾ ನಂತರ ನಿಮ್ಮ ಕುಟುಂಬದವರನ್ನು ನೋಡಿಕೊಳ್ಳುತ್ತೇನೆ ಎಂದು ಭರವಸೆ ಕೊಟ್ಟಿರಲಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಮಾತ್ರ ತನ್ನ ತಂದೆ ತಾಯಿಯನ್ನು ನೋಡಿಕೊಳ್ಳುವ ಏಕೈಕ ವ್ಯಕ್ತಿಯಾಗಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ತನ್ನ ತಂದೆ

ತಾಯಿಯವರನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹಾಗೂ ನಿಮ್ಮ ಕುಟುಂಬದವರು ಸದರಿ ಜವಾಬ್ದಾರಿಯನ್ನು ನೋಡಿಕೊಳ್ಳಲು ತಕರಾರು ಮಾಡಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಹಾಗೂ ನಿಮ್ಮ ಕುಟುಂಬದವರು 1 ನೇ ಆರೋಪಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಲು ಪ್ರಾರಂಭಿಸಿದ್ದಿರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಾನಸಿಕ ಮತ್ತು ದೈಹಿಕ ಹಿಂಸೆಯಿಂದ 1 ನೇ ಆರೋಪಿಯು ಮಾಗಡಿಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮಾಗಡಿಯ ಬಾಡಿಗೆ ಮನೆಯಲ್ಲಿಯೂ ಸಹ ನೀವು ಹಾಗೂ ನಿಮ್ಮ ಕುಟುಂಬದವರು 1 ನೇ ಆರೋಪಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮ್ಮ ಇಚ್ಛೆಯಂತೆ ಇರಲು ಒಪ್ಪದಿದ್ದ ಕಾರಣ ನೀವು 1 ನೇ ಆರೋಪಿಯನ್ನು ಬಿಟ್ಟು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನಿಮಗೆ ಯಾವುದೇ ತೊಂದರೆ ನೀಡದೆ ಇದ್ದ ಕಾರಣ ನೀವು ಸದರಿ ದಿನಗಳಂದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ದಿನಗಳನ್ನು ಹೊರತು ಪಡಿಸಿ ಬೇರೆ ದಿನಗಳಂದು ನಮಗೆ ತೊಂದರೆ ನೀಡಿದ್ದರಿಂದ ನಾವು ದೂರನ್ನು ಕೊಟ್ಟಿರುವುದಿಲ್ಲವೆಂದು ನುಡಿಯುತ್ತಾರೆ.

ನೀವು ಮಾಗಡಿಯ ಬಾಡಿಗೆ ಮನೆಯನ್ನು ಬಿಟ್ಟು ಹೋದ ನಂತರ 1 ನೇ ಆರೋಪಿಯನ್ನು ಸಂಪರ್ಕಿಸಲು ಪ್ರಯತ್ನ ಪಟ್ಟಿರುತ್ತೀರಿ ಎಂದರೆ ಸಾಕ್ಷಿ ನೇರವಾಗಿ ಅಲ್ಲ ಪೋನಿನ ಮೂಲಕ ಮಾತನಾಡಿರುತ್ತೇನೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಮೆಸೇಜ್ ಗಳ ಮುಖಾಂತರ ನಿಮಗೆ ಸದರಿ 1 ನೇ ಆರೋಪಿ ಜೊತೆ ಜೀವನ ನಡೆಸಲು ಕೇಳಿಕೊಂಡಿರುತ್ತಾರೆ ಎಂದರೆ

ಸಾಕ್ಷಿಯು ಕೇಳಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ, ಆದರೆ ನಾನು ಅದಕ್ಕೆ ಸಹಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮಗೆ ಎಷ್ಟು ಮೆಸೇಜ್ ಗಳನ್ನು ಕಳುಹಿಸಿದ್ದರು ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 12.01.2022 ರಂದು ನೀವು ನ್ಯಾಯಾಲಯದಿಂದ ಬಂದ ನೋಟೀಸನ್ನು ಸ್ವೀಕರಿಸಿರುತ್ತೀರಿ ಎಂದರೆ ಸಾಕ್ಷಿಯು ಯಾವ ನೋಟಿಸ್ ಎಂದು ನಿಖರವಾಗಿ ಗೊತ್ತಿರುವುದಿಲ್ಲ ಆದರೆ ವಿಚ್ಛೇಧನಕ್ಕಾಗಿ ಬಂದಿದ್ದ ನೋಟೀಸನ್ನು ಸ್ವೀಕರಿಸಿರುತ್ತೇನೆಎಂದು ನುಡಿಯುತ್ತಾರೆ. ಸದರಿ ನೋಟಿಸ್ ?ತಲುಪಿದ ನಂತರ ನೀವು ವಕೀಲರನ್ನು ಬೇಟಿ ಯಾಗಿರುತ್ತೀರಾ ಎಂದರೆ ಸಾಕ್ಷಿ ಹೌದು ಹಾಗೂ ವಕೀಲರು ಸದರಿ ನೋಟೀಸ್ ?ವಿಚ್ಛೇಧನಕ್ಕಾಗಿ ನೀಡಿದ ನೋಟೀಸ್ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಯಾವ ಕಾರಣಗಳನ್ನು ಸದರಿ ನೋಟೀಸ್ ನಲ್ಲಿ ತಿಳಿಸಿದ್ದರು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ವಕೀಲರು ನ್ಯಾಯಾಲಯಕ್ಕೆ ಹಾಜರಾಗಲು ತಿಳಿಸಿದ್ದರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು 1 ನೇ ಆರೋಪಿಯು ಸಲ್ಲಿಸಿರುವ ವಿಚ್ಛೇಧನ ಅರ್ಜಿಯ ಕೇಸಿನಲ್ಲಿ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರಾಗಲು ತಪ್ಪಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಉದ್ದೇಶಪೂರ್ವಕವಾಗಿ ಇರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ಅರ್ಜಿಯು ಚಾಲ್ತಿಯಲ್ಲಿಇರುತ್ತದೆಯೋ ಅಥವಾ ಮುಕ್ತಾಯ ಆಗಿರುತ್ತದೆಯೋ ಎಂದು ನಿಮಗೆ ಗೊತ್ತಿರುತ್ತದೆಯೇ ಎಂದರೆ ಸಾಕ್ಷಿ ಮುಕ್ತಾಯವಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವಾಗ ಸದರಿ ಅರ್ಜಿಯು ಮುಕ್ತಾಯ ಆಗಿರುತ್ತದೆ ಎಂದರೆ

ಸಾಕ್ಷಿಯು ಆಗಸ್ಟ್ ?2022 ರಲ್ಲಿ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಧೃಡೀಕೃತ ನಕಲನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಒಪ್ಪಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ನಂಬರ್ ಎಂ ಸಿ 63/2021 ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ವಿಚ್ಛೇಧನ ಅರ್ಜಿ ಮತ್ತು ಆದೇಶದಲ್ಲಿ ನಿಮ್ಮ ಹಾಗೂ ನಿಮ್ಮ ಕುಟುಂಬದವರ ವಿರುದ್ದ ಹಲವಾರು ಆರೋಪಗಳನ್ನು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಬರೆದಿರುತ್ತದೆ ಆದರೆ ಅದು ಸರಿ ಇರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಅರ್ಜಿಯಲ್ಲಿ ನಿಮ್ಮ ಹಾಗೂ ನಿಮ್ಮ ಕುಟುಂಬದವರ ವಿರುದ್ದ ಮಾಡಿರುವ ಆರೋಪಗಳನ್ನು ಮಾನ್ಯ ನ್ಯಾಯಾಲಯವು ಒಪ್ಪಿರುತ್ತದೆ ಎಂದರೆ ಸಾಕ್ಷಿ ನಾವು ಸದರಿ ಪ್ರಕರಣದಲ್ಲಿ ಹಾಜರಾಗದ ಕಾರಣ ಒಪ್ಪಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಆದೇಶದ ಪ್ರತಿಯನ್ನು ಪಡೆದ ನಂತರ ನಿಮಗೆ ಸದರಿ ಪ್ರಕರಣದಲ್ಲಿ ಕೆಲವು ಸುಳ್ಳು ಆರೋಪಗಳನ್ನು ಹೇಳಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ದ ಮೇಲ್ಮನವಿಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸಲ್ಲಿಸಿರುವುದಿಲ್ಲವೆಂದು ನುಡಿಯುತ್ತಾರೆ. ನೀವು ವಿಚ್ಛೇಧನವನ್ನು ಒಪ್ಪಿಕೊಳ್ಳಲು ತಯಾರು ಇರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು 1 ನೇ ಆರೋಪಿಯೊಂದಿಗೆ ಸುಖಸಂಸಾರವನ್ನು ನಡೆಸಲು ಒಪ್ಪಿಗೆ ಇರದ ಕಾರಣ ಸದರಿ ವಿಚ್ಛೇಧನ ಆದೇಶವನ್ನು ಒಪ್ಪಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಆ ರೀತಿ ಇರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ನಾನು ಮನೆಯಿಂದ ಹೊರಗೆ ಬಂದ ತಕ್ಷಣ ವಿಚ್ಛೇಧನ ಕೊಡಬೇಕು ಎಂಬ ಉದ್ದೇಶ ಇದ್ದಿರಲಿಲ್ಲ ಆದರೆ 1 ನೇ

ಆರೋಪಿಯ ನಡವಳಿಕೆಯಿಂದಾಗಿ ಸದರಿ ವಿಚ್ಛೇಧನವನ್ನು ಒಪ್ಪಿಕೊಳ್ಳಲು ನಿರ್ಧರಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ವಿಚ್ಛೇಧನವನ್ನು ಪಡೆಯಬೇಕು ಎಂಬ ಉದ್ದೇಶವನ್ನು ಹೊಂದಿದ್ದ ಕಾರಣ 1 ನೇ ಆರೋಪಿಗೆ ತೊಂದರೆ ಕೊಡಲು ಪ್ರಾರಂಭಿಸಿದ್ದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಅರ್ಜಿಯನ್ನು, ವಾಟ್ಸ್ ಆಫ್ ಮೆಸೇಜ್ ಗಳನ್ನು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯವು ಗಮನಿಸಿದ ನಂತರ ನೀವು ಹಾಗೂ ನಿಮ್ಮ ಕುಟುಂಬದವರು 1 ನೇ ಆರೋಪಿಗೆ ತೊಂದರೆ ನೀಡಿರುತ್ತೀರಿ ಎಂದು ಆದೇಶವನ್ನು ಮಾಡಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸದರಿ ಪ್ರಕರಣದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸದ ಕಾರಣ ಸದರಿ ಆದೇಶದಲ್ಲಿ ಹೇಳಿರುವ ಎಲ್ಲಾ ಆರೋಪಣೆಗಳು ಹಾಗೂ ದಾಖಲೆಗಳು ಸರಿ ಇರುತ್ತವೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

1 ನೇ ಆರೋಪಿಯು ಸದರಿ ವಿಚ್ಛೇಧನ ಪ್ರಕರಣದ ಆದೇಶದ ಪ್ರತಿಗಳನ್ನು ಪಡೆದ ನಂತರ ನೀವು ದಿನಾಂಕ 19.02.2024 ರಂದು ಯತೀಶ್ ಗೌಡ ರವರನ್ನು ವಿವಾಹ ಆಗಿರುತ್ತೀರಿ ಎಂದರೆ ಸಾಕ್ಷಿಯು ವಿವಾಹ ಆಗಿರುತ್ತೇನೆ ಆದರೆ ಪ್ರಕರಣದ ಬಗ್ಗೆ ಗೊತ್ತಿದ್ದಿರಲಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿಗಳು ನಿಮಗೆ ಪೋನಿನ ಮುಖಾಂತರ ಬೈಯ್ದಿರುತ್ತಾರೆ ಎಂದು ಹೇಳಿದ್ದು ಸದರಿ ಪೋನ್ ನಂಬರ್ ಅನ್ನು ಪೋಲಿಸರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿಗಳ ಆಸ್ತಿಯನ್ನು ಕೊಳ್ಳೆಹೊಡೆಯಲು ಉದ್ದೇಶಪೂರ್ವಕವಾಗಿ 1 ನೇ ಆರೋಪಿಯನ್ನು ವಿವಾಹವಾಗಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಆರೋಪಿಗಳು ನಿಮಗೆ ಯಾವುದೇ ವರದಕ್ಷಿಣೆ ಕಿರುಕುಳ ಹಾಗೂ ಮಾನಸಿಕ ಕಿರುಕುಳ ನೀಡದೆ ಇದ್ದರೂ ಆರೋಪಿಗಳ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮ್ಮ ಹಾಗೂ ನಿಮ್ಮ ಕುಟುಂಬದವರ ಮಾತನ್ನು ಕೇಳದ ಕಾರಣ ಆರೋಪಿಗಳ ವಿರುದ್ದ ಸುಳ್ಳು ಆರೋಪಗಳನ್ನು ಆಪಾದಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ನೀವು ಇದೇ ನ್ಯಾಯಾಲಯದಿಂದ ಯಾವುದಾದರೂ ನೋಟೀಸನ್ನು ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಪ್ರಸ್ತುತ ಕೇಸಿನಲ್ಲಿ ಸಾಕ್ಷಿ ಹೇಳಲು ಸಮನ್ಸ್ ಬಂದಿರುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಸಮನ್ಸ್ ಪಡೆದಿರುವುದಿಲ್ಲವೆಂದು ನುಡಿಯುತ್ತಾರೆ. 1 ನೇ ಆರೋಪಿಯು ನಿಮ್ಮ ವಿರುದ್ದ ಹಾಗೂ ನಿಮ್ಮ ತಂದೆ ತಾಯಿ, ತಂಗಿ, ಸೋದರಮಾವ ಮತ್ತು ಸೋದತ ಅತ್ತೆಯವರ ವಿರುದ್ದ ಒಂದು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ನಂಬರ್ ಪಿ ಸಿ ಆರ್ ನಂ.216/2021 ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣವು ಇನ್ನೂ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಿಮ್ಮಗಳ ವಿರುದ್ದ ಸಾಕಷ್ಟು ಆಪಾದನೆಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ತಪ್ಪನ್ನು ಮಾಡದೇ ಇದ್ದರೂ ನೀವು ಆರೋಪಿಗಳ ವಿರುದ್ದ ಒಂದು ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ನಿಮ್ಮ ಎಟಿಎಂ ಕಾರ್ಡ್ ಅನ್ನು 1 ನೇ ಆರೋಪಿಗೆ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಸದರಿ ಎಟಿಎಂ ಕಾರ್ಡ್ ಅನ್ನು ಬಂದ್ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು 1 ನೇ ಆರೋಪಿಗೆ ಸದರಿ ಎಟಿಎಂ ಕಾರ್ಡ್ ? ಅನ್ನು

ಕೊಟ್ಟಿರದ ಕಾರಣ ಬಂದ್ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಹಾಗೂ ನಿಮ್ಮ ಕುಟುಂಬದವರು ಶಾಮೀಲಾಗಿ ಪೋರ್ಜರಿ ದಾಖಲೆಗಳನ್ನು ಪೋಲಿಸರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**